ಪ್ರಜಾವಾಣಿ

Saturday, February 6th, 2010

# ‘ಫ್ರೇಜರ್ ಟೌನ್ ಶುಚಿ’ ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಾಧ್ವಾನಿ ಪ್ರತಿಷ್ಠಾನ, ರಾಷ್ಟ್ರೀಯ ಉದ್ಯಮಶೀಲ ಜಾಲ (ಎನ್‌ಇಎನ್), ಜೈನ್ ವಿಶ್ವವಿದ್ಯಾಲಯದ ರೇಡಿಯೊ ಆ್ಯಕ್ಟೀವ್ ಸಿಆರ್ 90.4 ಹಾಗೂ ಜೆ.ಸಿ.ರಸ್ತೆಯ ಜೈನ್ ಕಾಲೇಜಿನ ವಿದ್ಯಾರ್ಥಿ ಉದ್ಯಮಶೀಲ ಘಟಕ ಜಂಟಿಯಾಗಿ ಫ್ರೇಜರ್ ಟೌನ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸಹಯೋಗಿತ್ವದೊಂದಿಗೆ ಗುರುವಾರ ‘ಫ್ರೇಜರ್ ಟೌನ್ ಶುಚಿ’ ಅಭಿಯಾನ ನಡೆಸಿತು.

ಅಭಿಯಾನ ಉದ್ಘಾಟಿಸಿದ ಫ್ರೇಜರ್ ಟೌನ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪ್ರದೀಪ್ ಕುಮಾರ್ ರೆಡ್ಡಿ ಮಾತನಾಡಿ, ‘ಫ್ರೇಜರ್ ಟೌನ್ ಅನ್ನು 2010ರ ಆಗಸ್ಟ್ ತಿಂಗಳೊಳಗೆ ಮಾದರಿ ವಾರ್ಡ್ ಅನ್ನಾಗಿಸಬೇಕು ಎಂಬುದು ನನ್ನ ಕನಸು’ ಎಂದರು.

ಜೈನ್ ಕಾಲೇಜಿನ ವಿದ್ಯಾರ್ಥಿಗಳು ಫ್ರೇಜರ್ ಟೌನ್‌ನ ರಸ್ತೆಗಳಲ್ಲಿ ಪಾದಯಾತ್ರೆ ನಡೆಸಿ ಶುಚಿತ್ವದ ಬಗ್ಗೆ ಅರಿವು ಮೂಡಿಸಿದರು. ತ್ಯಾಜ್ಯವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ಆರೋಗ್ಯದ ಮೇಲೆ ಆಗುವ ಕೆಟ್ಟ ಪರಿಣಾಮಗಳ ಬಗ್ಗೆ ತಿಳಿಹೇಳಿದರು.